# ಹವ್ಯಾಸ ವೃತ್ತಿಯಾದಾಗ...


ಲತಾ ಪುಟ್ಟಣ್ಣ

ಲತಾ ಪುಟ್ಟಣ್ಣ 'ಸೃಷ್ಟಿ' ಫ್ಯಾಷನ್ ಲೇಬಲ್ ವಸ್ತ್ರಗಳ ವಿನ್ಯಾಸಕಿ. ಕಸೂತಿ ಮತ್ತು ಸೂಕ್ಷ್ಮ ವಿನ್ಯಾಸಕ್ಕಾಗಿ ಹೆಸರಾದವರು. ಇಪ್ಪತ್ತೂರು ವರ್ಷಗಳಿಂದ ವಸ್ತ್ರ ವಿನ್ಯಾಸ ಕ್ಷೇತ್ರದಲ್ಲಿದ್ದಾರೆ.

ವಿದೇಶದಲ್ಲೂ ಇವರು ವಿನ್ಯಾಸ ಮಾಡಿದ ದಿರಿಸಿಗೆ ತುಂಬ ಬೇಡಿಕೆ ಇದೆ. ವರ್ಷಕ್ಕೆ ಎರಡು ಬಾರಿ ತಾವು ವಿನ್ಯಾಸ ಮಾಡಿದ ದಿರಿಸುಗಳನ್ನು ಪ್ರದರ್ಶನಕ್ಕೆ ಇಡುತ್ತಾರೆ.

ಇತ್ತೀಚೆಗೆ ಯುಬಿ ಸಿಟಿಯಲ್ಲಿ ನಡೆದ ಜಾಗ್ವಾರ್ 'ಟ್ರೌಸೂ ವೀಕ್'ನ ವಿವಾಹ ಉತ್ಸವದಲ್ಲಿ ಇವರು ವಿನ್ಯಾಸ ಮಾಡಿದ 'ಮದುವೆ ಸಂಗ್ರಹ'ದ ಉಡುಪುಗಳು ಪ್ರದರ್ಶನಗೊಂಡವು.

ಈ ಬಾರಿ ಇವರ ಪ್ರದರ್ಶನದಲ್ಲಿ ದಿರಿಸಿಗೆ ನದಿಯ ಹೆಸರನ್ನು ಇಡಲಾಗಿದೆ. ಗಂಗಾ, ಗೋದಾವರಿ, ಕಾವೇರಿ, ಸಿಂಧು, ನರ್ಮದಾ ಎಂಬ ಹೆಸರನ್ನಿಟ್ಟಿದ್ದಾರೆ. ಈ ಬಾರಿ ವಧುವಿನ ಲೆಹಂಗಾದಲ್ಲಿ ತಮ್ಮ ವಿನ್ಯಾಸದ ಕೈಚಳಕವನ್ನು ತೋರಿಸಿದ ಲತಾ ತಮ್ಮ ಪ್ರದರ್ಶನ, ವಿನ್ಯಾಸ ವೃತ್ತಿಯ ಪಯಣದ ಕುರಿತು 'ಮೆಟ್ರೊ'ದೊಂದಿಗೆ ಒಂದಷ್ಟು ಮಾತನಾಡಿದರು.

**ನಿಮ್ಮ ಈ ಬಾರಿಯ ಬ್ರೈಡಲ್ ಸಂಗ್ರಹದ ಬಗ್ಗೆ ತಿಳಿಸಿ?**

ಮದುವೆ ಎನ್ನುವುದು ವಿಶೇಷವಾದದ್ದು. ಅದರಲ್ಲಿ ಮದುಮಗಳು ಎಲ್ಲರ ಕೇಂದ್ರಬಿಂದು. ಹಾಗಾಗಿ ನನ್ನ ಈ ಸಂಗ್ರಹದಲ್ಲಿ ಮದುಮಗಳ ದಿರಿಸಿಗೆ ಹೆಚ್ಚು ಒತ್ತು ನೀಡಿದ್ದೇನೆ. ಮದುವೆ ಸೀರೆ ಇಂದು ಉಟ್ಟು, ಇನ್ನೊಂದು ವರ್ಷದಲ್ಲಿ ಹಳೆದಾಗಿದೆ ಎಂದು ಮೂಲೆಗೆ ಹಾಕುವುದಲ್ಲ. ಮದುವೆ ಸೀರೆಯಲ್ಲಿ ಹೆಣ್ಣಿನ ಭಾವನಾತ್ಮಕ ಸಂಬಂಧವಿರುತ್ತದೆ. ಅದನ್ನು ಗೌರವಿಸಬೇಕು. ಹಾಗಾಗಿ ಈ ವಿನ್ಯಾಸವನ್ನು ತುಂಬ ವಿಶೇಷವಾಗಿ ಮಾಡಲಾಗಿದೆ. ಜತೆಗೆ ನದಿಯ ಹೆಸರನ್ನು ಇಟ್ಟಿದ್ದೇನೆ.
ಕಾಂಚಿಪುರಂ ಸಿಲ್ಕ್, ಕೇರಳ ಟಿಶ್ಯೂ, ಮೈಸೂರು, ಬನಾರಸ್ ಸಿಲ್ಕ್ ಬಳಸಿದ್ದೇನೆ.

**ನಿಮ್ಮ ಈ ಸಂಗ್ರಹಕ್ಕೆ ಜನರ ಪ್ರತಿಕ್ರಿಯೆ ಹೇಗಿತ್ತು?**

ಇದೇ ಮೊದಲ ಬಾರಿ ನಾನು ಬ್ರೈಡಲ್ ಸಂಗ್ರಹವನ್ನು ಪ್ರದರ್ಶಿಸುತ್ತಿರುವುದು. ಪ್ರತಿಕ್ರಿಯೆ ಉತ್ತಮವಾಗಿದೆ. ಜನ ದಿರಿಸಿನ ಜತೆಗೆ ಅದರ ಗುಣಮಟ್ಟವನ್ನು ಕೂಡ ನೋಡುತ್ತಾರೆ. ಸಾಕಷ್ಟು ಜನ ಈ ಸಂಗ್ರಹದ ಕುರಿತು ಮೆಚ್ಚುಗೆಯ ಮಾತನಾಡಿದ್ದಾರೆ.

**ನಿಮ್ಮ ವಿನ್ಯಾಸದ ಆಸಕ್ತಿಯ ಕುರಿತು ಹೇಳಿ?**


ಯುಬಿ ಸಿಟಿಯಲ್ಲಿ ನಡೆದ ಫ್ಯಾಷನ್ ಶೋನಲ್ಲಿ ರೂಪದರ್ಶಿಗಳೊಂದಿಗೆ ಲತಾ ಪುಟ್ಟಣ್ಣ

ನನಗೆ ಮೊದಲಿನಿಂದಲೂ ಕಲೆಯ ಕುರಿತು ಆಸಕ್ತಿ ಹೆಚ್ಚು. ನಾನು ವಿನ್ಯಾಸದ ಯಾವುದೇ ತರಗತಿಗೆ ಸೇರಿಲ್ಲ. ಮನೆಯಲ್ಲಿಯೇ ನನ್ನಿಷ್ಟದ ಪೇಂಟಿಂಗ್ ಮಾಡುತ್ತಿದ್ದೆ. ಬಣ್ಣದ ಬಳಕೆಯ ಕುರಿತು ನನಗೆ ಅರಿವಿತ್ತು. ಇದೇ ನನ್ನನ್ನು ವಿನ್ಯಾಸ ವೃತ್ತಿಯತ್ತ ಸೆಳೆಯಿತು. ಎಂಬ್ರಾಯಿಡರಿಯನ್ನು ಇಷ್ಟಪಟ್ಟು ಮಾಡುತ್ತಿದ್ದೆ. ಮೊದಲು ಹವ್ಯಾಸವಾಗಿ ಶುರುವಾದ ಇದು ಆಮೇಲೆ ವೃತ್ತಿಯಾಗಿ ಕೈಹಿಡಿಯಿತು. ಮದುವೆಯ ನಂತರ ನಾನು ವಿನ್ಯಾಸ ಕ್ಷೇತ್ರದಲ್ಲಿ ಮುಂದುವರಿದೆ. ನನ್ನ ತಾಯಿ, ಗಂಡ, ಅತ್ತೆ, ಮಕ್ಕಳು ತುಂಬ ಬೆಂಬಲ ನೀಡಿದ್ದಾರೆ.

**ಈ ವೃತ್ತಿಯಲ್ಲಿ ನಿಮಗೆ ಖುಷಿ ನೀಡಿದ ಕ್ಷಣ ಯಾವುದು?**

ಪ್ರತಿಯೊಂದು ದಿರಿಸು ವಿನ್ಯಾಸ ಮಾಡುವಾಗ ನನಗೆ ಖುಷಿ ಸಿಗುತ್ತದೆ. ಎಲ್ಲಕ್ಕಿಂತ ಹೆಚ್ಚು ಖುಷಿ ಸಿಕ್ಕಿದ್ದು ನಮ್ಮ ಪಾರಂಪರಿಕ ಕೆಎಸ್ಐಸಿ ರೇಷ್ಮೆ ಸೀರೆಗಳ ವಿನ್ಯಾಸಕಿಯಾಗಿ ನಿಯೋಜನೆಗೊಂಡಾಗ. ಕೆಎಸ್ಐಸಿಗಾಗಿ ಹೊಸ ಸೀರೆಗಳನ್ನು ವಿನ್ಯಾಸಗೊಳಿಸಿದ್ದೇನೆ. ಕೆಎಸ್ಐಸಿಯ ಪಾರಂಪರಿಕ ಚೌಕಟ್ಟಿನಲ್ಲಿ ಇಂದಿನ ಯುವತಿಯರು ಮೆಚ್ಚುವ ವಿನ್ಯಾಸ, ಬಣ್ಣಗಳ ಬಳಕೆ ಮಾಡಿದ ಖುಷಿ ಸಿಕ್ಕಿದೆ. ಎಲ್ಲೂ ಕಟ್‌ಪೀಸ್ ಬಳಸದೆ ಸೀರೆಯ ಬೇರೆ ಬೇರೆ ಭಾಗಗಳು ಭಿನ್ನ ರೀತಿಯಲ್ಲಿ ಕಾಣುವಂತೆ ನೇಯ್ಗೆ ಮಾಡಿರುವುದು ವಿಶೇಷ.

**ನಿಮ್ಮ ವಿನ್ಯಾಸದ ವೈಶಿಷ್ಟ್ಯವೇನು?**

ನಾನು ಟ್ರೆಂಡ್‌ಗಿಂತ ದಿರಿಸಿನ ಗುಣಮಟ್ಟಕ್ಕೆ ಹೆಚ್ಚು ಒತ್ತು ನೀಡುತ್ತೇನೆ. ನಮ್ಮಲ್ಲಿ ಸಿಗುವಷ್ಟು ಫ್ಯಾಬ್ರಿಕ್ಸ್ ಬೇರೆ ಎಲ್ಲೂ ಇಲ್ಲ. ಇದನ್ನೇ ಉಪಯೋಗಿಸಿಕೊಂಡು ನಾನು ವಿನ್ಯಾಸ ಮಾಡುತ್ತೇನೆ. ಜತೆಗೆ ನಾನು ನೇಯ್ಗೆಗೆ ಹೆಚ್ಚು ಪ್ರಾಮುಖ್ಯ ನೀಡುತ್ತೇನೆ.

**ಮುಂದಿನ ಪ್ರಾಜೆಕ್ಟ್ ಏನು?**

ನೇಯ್ಗೆ, ಕಸೂತಿಯನ್ನೇ ಹೆಚ್ಚಾಗಿ ಬಳಸಿಕೊಂಡು ಎಲ್ಲ ವರ್ಗದವರು ಮೆಚ್ಚುವ ದಿರಿಸುಗಳನ್ನು ವಿನ್ಯಾಸ ಮಾಡುವ ಕನಸಿದೆ.

ಮಾಹಿತಿಗೆ: ನಂ. 102, 2ನೇ ಕ್ರಾಸ್, ಲಾಲ್‌ಬಾಗ್ ಸಿದ್ದಾಪುರ, 1ನೇ ಬ್ಲಾಕ್, ಜಯನಗರ. 26567349 ಮೈಲ್ marketing@shrishtilathaputtanna.in.

**ಸಂದರ್ಶನ: ಪವಿತ್ರಾ ಶೆಟ್ಟಿ**